# ಕುವೆಂಪು ವಿಶ್ವವಿದ್ಯಾಲಯ

Accredited by NAAC with "A" Grade

73rd All India Rank in NIRF


ಸಂಖ್ಯೆ : ಕುವಿ/ಪವಿ/ಡಿಎಸ್-1/D 3728 /2019-20

ರಿಜಿಸ್ಟ್ರಾರ್ (ಮೌಲ್ಯಮಾಪನ) ರವರ ಕಛೇರಿ
ಜ್ಞಾನಸಹ್ಯಾದ್ರಿ ಶಂಕರಘಟ್ಟ – 577451
ಶಿವಮೊಗ್ಗ ಜಿಲ್ಲೆ
ದಿನಾಂಕ: 23-07-2019

## ಸುತ್ತೋಲೆ

ವಿಷಯ : ವಿಶ್ವವಿದ್ಯಾಲಯದ ದೂರಶಿಕ್ಷಣದ ಎಂ.ಬಿ.ಎ. ಕೋರ್ಸಿನ ಆಂತರಿಕ ಅಂಕಗಳನ್ನು ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡುವ ಕುರಿತು.

******

ದೂರಶಿಕ್ಷಣದ ಎಂ.ಬಿ.ಎ. ಕೋರ್ಸಿನ ಆಂತರಿಕ (I.A.) ಅಂಕಗಳನ್ನು ದಿನಾಂಕ: **25-07-19 ರಿಂದ 16-08-19** ರೊಳಗೆ ವಿಶ್ವವಿದ್ಯಾಲಯದ ವೆಬ್‌ಸೈಟ್‌ಗೆ ಕಡ್ಡಾಯವಾಗಿ ಸೇರ್ಪಡೆ (ಅಪ್‌ಲೋಡ್) ಮಾಡಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಸೂಚನೆ:

1. ಪ್ರಾಯೋಗಿಕ ಮತ್ತು ಆಂತರಿಕ (I.A.) ಅಂಕಗಳನ್ನು ವೆಬ್‌ಸೈಟ್‌ಗೆ 2013ರಿಂದ ಜಾರಿಯಲ್ಲಿರುವ ನಿಯಮದ ಪ್ರಕಾರವೇ oasis.logisys.org/kusdde ನಲ್ಲಿ ಲಾಗಿನ್ ಆಗಿ ನಮೂದಿಸಬೇಕು. ಆಂತರಿಕ ಅಂಕಗಳನ್ನು Before Exam – I.A. Marks – I.A. Marks Entry option ನಲ್ಲಿ ಸೇರ್ಪಡೆ ಮಾಡಬೇಕು.
2. ವಿಶ್ವವಿದ್ಯಾಲಯದ ನಿಯಮಾವಳಿಗಳ ಪ್ರಕಾರ ಲಿಖಿತ ಪರೀಕ್ಷೆಗಿಂತ ಮುಂಚಿತವಾಗಿ ಆಂತರಿಕ ಅಂಕಗಳು ದಾಖಲಾಗಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ, ಶಂಕರಘಟ್ಟ ಹಾಗೂ ಎಲ್ಲಾ ಅಧ್ಯಯನ ಕೇಂದ್ರಗಳ ಕೋ-ಆರ್ಡಿನೇಟರ್‌ಗಳು ಈ ಕುರಿತು ಸೂಕ್ತ ಕ್ರಮಕೈಗೊಳ್ಳುವುದು.
3. ಎಲ್ಲಾ ವಿದ್ಯಾರ್ಥಿಗಳ ಅಂಕಗಳನ್ನು upload ಮಾಡಿದ ನಂತರ ಪರಿಶೀಲಿಸಿ freeze ಮಾಡಬೇಕು. ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಲ್ಲಿ ಅಂತಹ ಪ್ರಕರಣಗಳನ್ನು ತಪ್ಪದೇ Absent ಎಂದು ನಮೂದಿಸತಕ್ಕದ್ದು. ಯಾವುದೇ ಕಾರಣಕ್ಕೂ ಖಾಲಿ ಬಿಡತಕ್ಕದ್ದಲ್ಲ. ನಂತರ ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲ, ಹಾಗಾಗಿ ಎಲ್ಲಾ ವಿದ್ಯಾರ್ಥಿಗಳ ಅಂಕಗಳನ್ನು upload ಮಾಡಿರುವ ಬಗ್ಗೆ ಪರಿಶೀಲಿಸಿ ಖಾತ್ರಿ ಮಾಡಿಕೊಳ್ಳತಕ್ಕದ್ದು. ವಿದ್ಯಾರ್ಥಿಗಳ ಹೆಸರು ಬಿಟ್ಟು ಹೋಗಿದ್ದಲ್ಲಿ ಅಥವಾ ಬದಲಾವಣೆ ಏನಾದರೂ ಇದ್ದಲ್ಲಿ ಕೊನೆಯ ದಿನಾಂಕದೊಳಗಾಗಿ ಪರೀಕ್ಷಾ ವಿಭಾಗವನ್ನು ಸಂಪರ್ಕಿಸುವುದು. **ನಂತರದಲ್ಲಿ ಯಾವುದೇ ವಿದ್ಯಾರ್ಥಿಗಳ ವಿಷಯದ ಮುಂದೆ ಖಾಲಿ ಇದ್ದಲ್ಲಿ/ಅಂಕ ನಮೂದಿಸದೆ ಇದ್ದಲ್ಲಿ ಗೈರು ಹಾಜರಿ ಎಂದು ನಮೂದಿಸಿ ಫಲಿತಾಂಶ ಪ್ರಕಟಿಸಲಾಗುವುದು.**
4. ಎಲ್ಲಾ ವಿದ್ಯಾರ್ಥಿಗಳ ಅಂಕಗಳನ್ನು upload ಮಾಡಿದ ನಂತರ ಅಂಕಗಳ ಮೂಲ ಪ್ರತಿಗಳನ್ನು upload ಮಾಡಿದ print out ದೃಢೀಕರಿಸಿ ಉತ್ತರ ಪತ್ರಿಕೆಗಳೊಂದಿಗೆ ಬಂಡಲ್ ಮಾಡಿ ದಿನಾಂಕ:26-08-2019 ರೊಳಗಾಗಿ ಕುಲಸಚಿವ(ಪರೀಕ್ಷಾಂಗ)ರವರಿಗೆ ಕಡ್ಡಾಯವಾಗಿ ಕಳುಹಿಸಿಕೊಡುವುದು.
5. ನಿಗದಿತ ದಿನಾಂಕದೊಳಗೆ upload ಮಾಡದಿರುವ ಹಾಗೂ ಹಾರ್ಡ್ ಕಾಪಿಯಲ್ಲಿ ಸಲ್ಲಿಸುವ ಅಂಕಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲವೆಂದು ತಿಳಿಸಲಾಗಿದೆ. ಒಂದು ವೇಳೆ ಅಂತಹ ಪ್ರಕರಣಗಳು ಉಂಟಾದಲ್ಲಿ ವಿಶ್ವವಿದ್ಯಾಲಯವು ಜವಾಬ್ದಾರಿಯಾಗಿರುವುದಿಲ್ಲ, ಇದರಿಂದ ಉಂಟಾಗುವ ತೊಂದರೆಗಳಿಗೆ ತಾವೇ ನೇರ ಹೊಣೆಗಾರರಾಗಿರುತ್ತೀರಿ ಎಂಬುದನ್ನು ಸ್ಪಷ್ಟಪಡಿಸಲಾಗಿದೆ.
6. Upload ಮಾಡುವ ಸಂದರ್ಭದಲ್ಲಿ ಯಾವುದೇ ತಾಂತ್ರಿಕ ತೊಂದರೆಗಳು ಉಂಟಾದಲ್ಲಿ logisys.helpdesk@gmail.com email ಮೂಲಕ ತಿಳಿಸುವುದು.

23/7/19

ಕುಲಸಚಿವರು (ಮೌಲ್ಯಮಾಪನ)

ರಿಜಿಸ್ಟ್ರಾರ್ (ಮೌಲ್ಯಮಾಪನ)
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ, ಶಂಕರಘಟ್ಟ-577 451

23/7/19

ಗೆ,

1. ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2. ಎಂ.ಬಿ.ಎ. ಕೋರ್ಸಿನ ಅಧ್ಯಯನ ಕೇಂದ್ರಗಳ ಕೋ-ಆರ್ಡಿನೇಟರ್‌ಗಳಿಗೆ

ಪ್ರತಿ:

1. ಮಾನ್ಯಕುಲಪತಿಗಳ ಆಪ್ತ ಸಹಾಯಕರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – ಮಾಹಿತಿಗಾಗಿ
2. ಉಪಕುಲಸಚಿವರು/ಸಹಾಯಕ ಕುಲಸಚಿವರು, ದೂರಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – ಮಾಹಿತಿಗಾಗಿ
3. ಕಛೇರಿ ಪ್ರತಿ.